**ಸಾಕ್ಷಿಯನ್ನು ಪುನಃ ಕರೆಸಿ ದಿನಾಂಕಃ17.06.2026 ರಂದು ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀಸವಾಲುಃ ಎದುರುದಾರರ ಪರ ಶ್ರೀಮತಿ. ಎಸ್ ಎಮ್ ಎಸ್ ವಕೀಲರಿಂದಃ**

ನನ್ನ ವಿವಾಹದ ವೇಳೆಯಲ್ಲಿ ವರೋಪಚಾರವಾಗಿ ನೀಡಿರುವ ಆಭರಣಗಳ ಬಾಬ್ತು ರಶೀದಿಗಳು ಇರುತ್ತವೆ ಅದನ್ನು ಹಾಜರುಪಡಿಸಿಲ್ಲ. ಮದುವೆಗಾಗಿ ಚಿನ್ನದ ಉಂಗುರ, ತಾಳಿ ಸರವನ್ನು ಎದುರುದಾರರು ನೀಡಿರುತ್ತಾರೆ ಎಂದರೆ ಸರಿಯಲ್ಲ. ಆತನೊಂದಿಗೆ ಎರಡು ವರ್ಷಗಳ ಕಾಲ ಅನ್ಯೋನ್ಯವಾಗಿ ಸಂಸಾರ ನಡೆಸಿಲ್ಲದೇ ಯಾವಾಗಲೂ ಗಲಾಟೆ ಮಾಡುತ್ತಿದ್ದೆ ಎಂದರೆ ಸರಿಯಲ್ಲ. ಆತ ಕುಡಿತ ಚಟವನ್ನು ಹೊಂದಿದ್ದು ಪರಸ್ತ್ರೀ ಯೊಂದಿಗೆ ಸಂಬಂಧ ಹೊಂದಿರುವುದು ಸುಳ್ಳಾಗಿರುತ್ತದೆ ಎಂದರೆ ಸರಿಯಲ್ಲ. ನಾನು ಪದೇ ಪದೇ ತವರು ಮನೆಗೆ ಹೋಗುತ್ತಿದ್ದಾಗ ಎದುರುದಾರರು ತಿಂಗಳಿಗೊಮ್ಮೆ ಒಟ್ಟಾಗಿ ಹೋಗುವಂತೆ ಸೂಚಿಸಿದಾಗ ನಾನು ತಕರಾರು ಮಾಡಿರುತ್ತೇನೆ ಎಂದರೆ ಸರಿಯಲ್ಲ. ಆತ ನನಗೆ ಮತ್ತು ನನ್ನ ಮಗುವಿಗೆ ಯಾವುದೇ ತೊಂದರೆ ನೀಡಿಲ್ಲದೇ ಅನವಶ್ಯಕವಾಗಿ ನಾನು ಆತನ ವಿರುದ್ಧ ದೂರು ನೀಡಿರುತ್ತೇನೆ ಎಂದರೆ ಸರಿಯಲ್ಲ. ಸಾಕ್ಷಿಯೂ 4 ವರ್ಷಗಳಾದರೂ ಈವರೆಗೂ ಮಗುವನ್ನು ಎಂದಿಗೂ ನೋಡಿಕೊಂಡಿಲ್ಲ ಎಂದು ನುಡಿಯುತ್ತಾರೆ.

ನಮ್ಮನ್ನು ಎದುರುದಾರರು ಚೆನ್ನಾಗಿ ನೋಡಿಕೊಳ್ಳುತ್ತಿದ್ದು, ಮನೆ ಕಟ್ಟಲು ನಾನು ಪೀಡಿಸಿದ ಕಾರಣ ಆತ ಸಂಘದಿಂದ ಸಾಲ ಪಡೆದಿರುತ್ತಾರೆ ಎಂದರೆ ಸಾಕ್ಷಿಯೂ ಸಾಲವನ್ನು ತಾನೇ ತೆಗೆದುಕೊಟ್ಟಿರುವುದಾಟ ನುಡಿಯುತ್ತಾರೆ. ನನ್ನನ್ನು ಮತ್ತು ಮಗುವನ್ನು ನೋಡಲು ಬಂದಾಗ ನಾವು ಬಾಗಿಲು ತೆಗೆದಿರುವುದಿಲ್ಲ ಎಂದರೆ ಸಾಕ್ಷಿಯೂ ಅವರು ನನಗೆ ಸಾಕಷ್ಟುಬಾರಿ ಹೊಡೆದು ಹಲ್ಲೆ ಮಾಡಿದ ಕಾರಣ ನನ್ನ ಪೋಷಕರು ಭಯ ಪಟ್ಟಿರುತ್ತಾರೆ ಎಂದು ನುಡಿಯುತ್ತಾರೆ. ಎದುರುದಾರರು ನನ್ನನ್ನು ಮತ್ತು ಮಗುವನ್ನು ಚೆನ್ನಾಗಿ ನೋಡಿಕೊಳ್ಳುತ್ತಿದ್ದು, ಯಾವುದೇ ಮಾನಸಿಕ ಹಾಗೂ ದೈಹಿಕ ಹಿಂಸೆ ನೀಡಿಲ್ಲ ಎಂದರೆ ಸರಿಯಲ್ಲ. ಎದುರುದಾರರು ಅಪಘಾತಕ್ಕೆ ಒಳಾಗಾಗಿ ಶಸ್ತ್ರ ಚಿಕಿತ್ಸೆ ಮಾಡಿಸಿಕೊಂಡಿದ್ದು, ವಯಸ್ಸಾದ ಪೋಷಕರು ಹಾಗೂ ನಮ್ಮನ್ನು

ನೋಡಿಕೊಳ್ಳುವ ಹೊಣೆಗಾರಿಕೆ ಇರುವ ಕಾರಣ ನಾನು ಅವರೊಂದಿಗೆ ಹೋಗಿ ಜೀವನ ನಡೆಸಬೇಕೆಂದು ಬಯಸುತ್ತಾರೆ ಎಂದರೆ ಸಾಕ್ಷಿಯೂ ಸಾಕಷ್ಟು ಬಾರಿ ಹಲ್ಲೆ ಮಾಡಿರುವ ಕಾರಣ ಧೈರ್ಯವಿಲ್ಲ ಎಂದು ನುಡಿಯುತ್ತಾರೆ. ಆತನಿಗೆ ಅಪಘಾತದಿಂದ ಕಾಲಿಗೆ ಶಸ್ತ್ರ ಚಿಕಿತ್ಸೆ ಆಗಿರುವ ಕಾರಣ ಯಾವುದೇ ಕೆಲಸ ಮಾಡುತ್ತಿಲ್ಲದೇ ಜೀವನಾಂಶವನ್ನು ನಮಗೆ ನೀಡಲು ಸಮರ್ಥನಾಗಿರುವುದಿಲ್ಲ ಎಂದರೆ ಸರಿಯಲ್ಲ.

(ಈ ಹಂತದಲ್ಲಿ ಮುಂದುವರೆದ ಪಾಟೀಸವಾಲವನ್ನು ಮುಂದೂಡಲಾಯಿತು).

(ತೆರೆದ ನ್ಯಾಯಾಲಯದಲ್ಲಿ ನನ್ನ ಉಖ್ತಲೇಖನಕ್ಕೆ ಬೆರಳಚ್ಚು ಮಾಡಲಾಗಿದೆ.)

ಓ.ಹೇ.ಕೇ.ಸ.ಇದೆ ಎಂದು ಒಪ್ಪಿದೆ.

**Sd/-**

**ಪ್ರಧಾನ ದಿವಾನಿ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ.,**
**ನಂಜನಗೂಡು.**